# ವೈದ್ಯ, ಎಂಜಿನಿಯರ್ ಆಗದಿದ್ದಕ್ಕೆ ನಟನಾದೆ!

## ರಾಜೇಶ್ ನಟರಂಗ
## ಝೀ ಕನ್ನಡದ 'ಅಮೃತಧಾರೆ' ಗೌತಮ್ ದಿವಾನ್



◆ **ನಿಮ್ಮ ಆರಂಭದ 'ಮಾಯಾಮೃಗ', 'ಬದುಕು' ಸ್ವರೂಪಕ್ಕೆ ಹೋಲಿಸಿದರೆ, ಈಗ ಏನೆಲ್ಲ ಬದಲಾವಣೆ ಆಗಿದೆ ಎಂದೆನಿಸುತ್ತದೆ?**

ವಿಷಯವನ್ನು ನಿರೂಪಿಸುವ ಕಲೆ ಮತ್ತು ತಾಂತ್ರಿಕವಾಗಿ ತುಂಬ ಅಭಿವೃದ್ಧಿಯನ್ನು ಹೊಂದಿದ್ದೇವೆ. ಜೊತೆಗೆ ಹೆಚ್ಚು ಉದ್ಯಮಶೀಲರಾಗಿದ್ದೇವೆ. ಹಾಗೆಂದು ಹಿಂದೆ ವ್ಯಾವಹಾರಿಕತೆ ಇರಲಿಲ್ಲ ಎಂದಲ್ಲ. ಈಗಿನಷ್ಟು ಇರಲಿಲ್ಲ. ಇದನ್ನು ಅಮೆರಿಕ ಮಾದರಿ ಎನ್ನಬಹುದು. ಪಾತ್ರಧಾರಿಗಳ ಪ್ರಸಾಧನ, ಆಭರಣ, ಅಲಂಕಾರವನ್ನು ಟೀವಿಯಲ್ಲಿ ನೋಡಿದ ಜನ ಏನೆಲ್ಲ ಮಾತನಾಡುತ್ತಾರೆ ಎನ್ನುವ ಸಂಗತಿಯನ್ನು ದಾಟಿಸುತ್ತಿದ್ದೇವೆ ಎಂದು ಅನ್ನಿಸುತ್ತದೆ. ನಾನು ರಂಗಭೂಮಿ ಹಿನ್ನೆಲೆಯಿಂದ ಟೀವಿಯನ್ನು ಪ್ರವೇಶ ಮಾಡಿದವನು. ಆ ಕಾಲಕ್ಕೆ ನಿರ್ದೇಶಕರೇ ನಿರ್ದೇಶನ ಮಾಡುತ್ತಿದ್ದರು. ಈಗ ಪರಿಸ್ಥಿತಿ ಹಾಗಿಲ್ಲ. ಒಂದು ವಾಹಿನಿಯೇ ಎಲ್ಲದರ ನಿರ್ದೇಶನವನ್ನು ಮಾಡುತ್ತದೆ. ಕಥೆ ಸ್ವರೂಪ ಸೇರಿದಂತೆ ಯಾರು ಏನು ಮಾಡಬೇಕು ಎಂದು ಅದು ಹೇಳುತ್ತದೆ. ಮೊದಲು ನಿರ್ದೇಶಕರ ಜೊತೆ ಲೇಖಕರು, ಸಂಭಾಷಣೆಗಾರರ ತಂಡ ಇರುತ್ತಿತ್ತು. ಅದು ಕಥೆಯನ್ನು ರಚಿಸುತ್ತಿತ್ತು. ಕಲಾವಿದರನ್ನು ಆಯ್ಕೆ ಮಾಡುವ ಹಕ್ಕು ನಿರ್ದೇಶಕನಿಗೆ ಇರ್ತಾ ಇತ್ತು. ಈಗ ನಿರ್ಮಾಪಕರನ್ನೂ ವಾಹಿನಿಯೇ ನಿರ್ಧರಿಸುತ್ತದೆ. ವಾಹಿನಿ ನಿರ್ದೇಶಿಸುವ ಕಂಟೆಂಟ್‌ಗೆ ಆದ್ಯತೆ ಇರುತ್ತದೆ. ಮೊದಲು ಬರವಣಿಗೆಯನ್ನು ಬೇರೆ ಪರಿಣತ ತಂಡ ನಿರ್ವಹಿಸುತ್ತಿತ್ತು. ತಾಂತ್ರಿಕವಾಗಿ ಅಷ್ಟು ಮುಂದಿರಲಿಲ್ಲ. ಸೀರಿಯಲ್ ತೋರಿಸುವ ವಿಧಾನದಲ್ಲಿ ಈಗಿನಷ್ಟು ಪ್ರಯೋಗಗಳು ಮತ್ತು ಪ್ರಚಾರ ಕೂಡ ನಡೆಯುತ್ತಿರಲಿಲ್ಲ. ಅದನ್ನು ವ್ಯಾಖ್ಯಾನ ಮಾಡುವ ಸ್ಥಾನದಲ್ಲಿ ನಾನು ಇಲ್ಲ. ನಟರಾದ ನಮ್ಮ ಆಯ್ಕೆಗೆ ಈಗ ಕಿರುಪರೀಕ್ಷೆ ಕಡ್ಡಾಯ. ಅದನ್ನು ಸ್ಕ್ರೀನ್ ಟೆಸ್ಟ್ ಎನ್ನುತ್ತೇವೆ. ಮೊದಲು ಯಾವುದೋ ವೇದಿಕೆಯಲ್ಲಿ ನಮ್ಮ ಅಭಿನಯ ನೋಡಿ ನಾಳೆ ಚಿತ್ರೀಕರಣಕ್ಕೆ ಬನ್ನಿ ಎಂದು ಕರೆಯುತ್ತಿದ್ದರು. ಇವತ್ತು ಟಿಕ್ ಟಾಕ್ ಸ್ಟಾರ್, ರೀಲ್ಸ್ ಸ್ಟಾರ್‌ಗಳ ಜನಪ್ರಿಯತೆ ಹಿನ್ನೆಲೆಯಲ್ಲಿ ಆಯ್ಕೆ ಮಾಡುವ ಪ್ರವೃತ್ತಿಯೂ ಬೆಳೆದಿದೆ. ಜನ ಅದನ್ನೇ ಇಷ್ಟಪಡುತ್ತಾರೆ ಎಂದೆನಿಸುತ್ತದೆ. ಅದಕ್ಕೂ ಟಿಆರ್‌ಪಿ ಎಂಬ ಒಂದು ಮಾನದಂಡ ಇದೆ. ಅದರ ಹಿನ್ನೆಲೆಯಲ್ಲಿ ಅನೇಕ ಸಂಗತಿಗಳು ಬದಲಾಗುತ್ತಿವೆ.

◆ **ಕಲಾ ಕ್ಷೇತ್ರ ನಿಮ್ಮನ್ನು ನಟ ಎಂದು ಆಹ್ವಾನಿಸಿದ ಸಂದರ್ಭ ಹೇಗಿತ್ತು?**

ಅದಕ್ಕೆ ಸಿದ್ಧತೆ ಇರಲಿಲ್ಲ. ಶಾಲೆಯಲ್ಲಿ ನನ್ನ ಗೆಳೆಯ ಒಬ್ಬ ಬಂದಿರಲಿಲ್ಲ. ಅವನು ಸಿನಿಮಾ ಹಾಡಿನ ಸನ್ನಿವೇಶಕ್ಕೆ ನಟಿಸಬೇಕಿತ್ತು. ಗೆಳೆಯ ನಿರ್ವಹಿಸಬೇಕಾದ ಪಾತ್ರವನ್ನು ನಾನು ಮಾಡಿದೆ. ಚಪ್ಪಾಳೆ ಸಿಕ್ಕಿತು. ಅದು ಖುಷಿ ಕೊಟ್ಟಿದ್ದರಿಂದ ಅಲ್ಲಿಂದ ಶುರುವಾಯಿತು ಎಂದೆನಿಸುತ್ತದೆ. ಮೂಲತಃ ತುಂಬ ಬುದ್ಧಿವಂತ ಅಲ್ಲದ್ದರಿಂದ ನನಗೆ ಎಲ್ಲಿ ಮೆಚ್ಚುಗೆ ಸಿಗುತ್ತಿತ್ತೋ ಅಲ್ಲಿ ಒಲವನ್ನು ಬೆಳೆಸಿಕೊಂಡೆ ಎಂದೆನಿಸುತ್ತದೆ. ನಂತರ 'ಮಕ್ಕಳ ಕೂಟ'ದ ಸಂಪರ್ಕ ಬಂತು. ಅಲ್ಲಿ ನಾಟಕಗಳನ್ನು ಆಡಲು ಶುರುಮಾಡಿದೆ. ಅಂತರಶಾಲೆ ಸ್ಪರ್ಧೆಗಳಲ್ಲಿ ಭಾಗವಹಿಸಿ ಅನೇಕ ಬಹುಮಾನ ತಂದೆ. ಪಿಯು ಓದುವಾಗ ಈ ರೀತಿಯ ಚಟುವಟಿಕೆಗೆ ಪೋಷಕರು ನಿರ್ಬಂಧ ಹಾಕಿದರು. ಎಂಜಿನಿಯರ್ ಇಲ್ಲ ಡಾಕ್ಟರ್ ಆಗಬೇಕು ಎನ್ನುವುದು ಪೋಷಕರ ಇಂಗಿತವಾಗಿತ್ತು. ನಾನು ಏನಾಗುತ್ತೇನೆ ಎನ್ನುವುದು ನನಗೆ ಗೊತ್ತಿರಲಿಲ್ಲ. ಅದೃಷ್ಟವೋ ದುರದೃಷ್ಟವೋ ಆ ಎರಡೂ ಆಗಲಿಲ್ಲ. ಮೊದಲ ಶ್ರೇಣಿಯಲ್ಲಿ ಪಾಸಾದರೂ ನ್ಯಾಷನಲ್ ಕಾಲೇಜಿಗೆ ಎಲೆಕ್ಟ್ರಾನಿಕ್ಸ್ ಬಿ.ಎಸ್‌ಸಿಗೆ ಸೇರಿದೆ. ಅಲ್ಲಿ ನಮ್ಮ ಮೇಷ್ಟ್ರ ಗರಡಿಯಲ್ಲಿ ರಂಗ ಚಟುವಟಿಕೆ ಮತ್ತೆ ಆರಂಭವಾಯಿತು. ಅಲ್ಲಿನ ವಾತಾವರಣವೂ ತುಂಬ ಆಕರ್ಷಣೀಯವಾಗಿತ್ತು. ಆಗ ಕಾಲೇಜಿಗೆ ಹೋದರೂ ತರಗತಿಗೆ ಕೂರಲು ಆಗದಷ್ಟು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬಿಜಿ ಆದೆ. ಕ್ರಿಕೆಟ್ ಆಡ್ತಿದ್ದೆ, ಟ್ರೆಕಿಂಗ್ ಹೋಗುತ್ತಿದ್ದೆ. ಅದೇ ಸಮಯದಲ್ಲಿ ಶರತ್ ಲೋಹಿತಾಶ್ವ ಮೂಲಕ 'ನಟರಂಗ' ಪರಿಚಯ ಆಯಿತು. ಸಿ.ಆರ್. ಸಿಂಹ ಅವರ ನಿರ್ದೇಶನದ 'ತಲೆದಂಡ'ದಲ್ಲಿ ಪುಟ್ಟ ಪಾತ್ರ ಮಾಡಿದೆ. ಆ ಮೂಲಕ ಹವ್ಯಾಸಿ ರಂಗಭೂಮಿ ಪ್ರವೇಶ ಮಾಡಿದೆ. ಅಲ್ಲಿಂದ ಬೇರೆ ಬೇರೆ ಪಾತ್ರಗಳು ಸಿಕ್ಕವು. ನನಗೆ ಐಡೆಂಟಿಟಿ ಸಿಗಲು ಶುರುವಾಯಿತು. ಅಲ್ಲಿ ಗುರುತಿಸಿಕೊಳ್ಳಲು ಪುಣ್ಯ ಇರಬೇಕು ಎಂದು ಈಗ ಅನ್ನಿಸುತ್ತದೆ. ನಟರಂಗದ ಮೂಲಕ ಅನೇಕ ಸೃಜನಶೀಲ ವ್ಯಕ್ತಿತ್ವಗಳು ಪರಿಚಯವಾಯಿತು. ಖ್ಯಾತ ನಿರ್ದೇಶಕರು, ಸಾಹಿತಿಗಳು ಸಂಪರ್ಕಕ್ಕೆ ಬಂದರು. ಅದು ನನಗೆ ಸಿಕ್ಕ ದೊಡ್ಡ ಭಾಗ್ಯ ಎಂದು ಅಂದುಕೊಂಡಿದ್ದೇನೆ. ಇವತ್ತಿನ ಪರಿಸ್ಥಿತಿ ನೋಡಿದರೆ ಅವತ್ತಿನ ಮೌಲ್ಯ ಏನು ಎಂದು ಗೊತ್ತಾಗುತ್ತದೆ. ಅಲ್ಲಿ ಲೋಕೇಶ್ ಮತ್ತು ಲೋಕನಾಥ್ ಅವರಂತಹ ಅದ್ಭುತ ಪ್ರತಿಭೆಗಳು ಸಾಕಷ್ಟು ಕಲಿಸಿದವು. ನಾನು 'ಮಾಯಾಮೃಗ' ಆಹ್ವಾನ ಬಂದಾಗ ನಾನು ಶಾಲೆಗೆ ಸೇರಬೇಕು ಎಂದುಕೊಂಡಿದ್ದೆ, ಆದರೆ ಕಾಲೇಜಿಗೆ ಸೇರಿಸಿದಿರಿ ಎಂದಿದ್ದೆ. ಒಬ್ಬ ನಟನಿಗೆ ಸಾಮಾಜಿಕ ಜವಾಬ್ದಾರಿ ಇರಬೇಕು ಎನ್ನುವ ಸಂಗತಿಯನ್ನು ನಟರಂಗ ಕಲಿಸಿತು. ಆ ಹಿನ್ನೆಲೆಯಲ್ಲಿ ನಿಧಾನಕ್ಕೆ ಕಲಿಯಬೇಕು ಎಂದುಕೊಂಡಿದ್ದೆ.

◆ **ಈಗ ಪೋಷಕ ಪಾತ್ರಗಳು ಕಥೆಗೆ ಎಷ್ಟು ಪೂರಕವಾಗಿವೆ?**

ಮೂಲ ಕಂಟೆಂಟ್ ಆಧರಿಸಿ ಕಥೆಯ ನಿರೂಪಣೆ ಇರಲ್ಲ. ಈ ತಂತ್ರ ಬಂದು ದಶಕವೇ ಕಳೆದಿದೆ. ನಾಯಕ–ನಾಯಕಿಯನ್ನು ತೋರಿಸಿ ಕಥೆಯನ್ನು ಹೇಳುವ ಪ್ರಯತ್ನ ಈಗ ನಡೆಯುತ್ತಿದೆ. ಈ ಪರಿಕಲ್ಪನೆ ಉತ್ತರದಿಂದ ಬಂದಿದೆ ಎಂದು ಅನ್ನಿಸುತ್ತದೆ. ಕನ್ನಡ ಧಾರಾವಾಹಿ ವಿಕಾಸದ ಆರಂಭದ ಹಂತದಲ್ಲಿಯೇ ನಾವು ಕ್ರಿಯಾಶೀಲರಾಗಿದ್ದೆವು. ಹಾಗಾಗಿ ಏನೆಲ್ಲ ಆಗಿದೆ ಎಂದು ಗೊತ್ತು. ಮೊದಲು ನಾವು ದಿನವೂ ತೆರೆ ಮೇಲೆ ಬರುತ್ತಿರಲಿಲ್ಲ ಆದರೂ ಜನ ಮೆಚ್ಚುತ್ತಿದ್ದರು. ನಮ್ಮ ಪಾತ್ರ ಏನು ಮಾಡುತ್ತಿದೆ ಎನ್ನುವುದು ಗೊತ್ತಾಗುತ್ತಿತ್ತು. ಮಹಿಳಾ ಪ್ರಧಾನ ಕಥೆಯೇ ಆಗಲೂ ಇತ್ತು, ಈಗಲೂ ಇದೆ. ಆದರೆ ಹೇಳುವ ಕ್ರಮದಲ್ಲಿ ಸಾಕಷ್ಟು ವ್ಯತ್ಯಾಸವಿದೆ. ವೀಕ್ಷಕರನ್ನು ಗುರಿಯಾಗಿಸಿ ಕಥೆ ರೂಪಿಸುವುದು ಒಂದು ಪ್ರಯತ್ನ. ಸಾಮಾನ್ಯವಾಗಿ ಒಂದು ಗಂಡು ಒಂದು ಹೆಣ್ಣು, ಇಲ್ಲ ಒಂದು ಗಂಡು ಎರಡು ಹೆಣ್ಣಿನ ನಡುವೆ ಕಥೆ ನಿರೂಪಿಸುವ ಸೂತ್ರ ಪ್ರಯೋಗ ಆಗುತ್ತಲೇ ಇದೆ. ಇದೇ ಯಾಕೆ ಎನ್ನುವುದಾದರೆ ಅದರ ಯಶಸ್ಸಿಗೆ ಪೂರಕ ಸಮೀಕ್ಷೆ ಇದೆ. ಹಾಗಾಗಿ ಅದನ್ನೇ ಆಧರಿಸಿ ಸಾಗುತ್ತಿದ್ದೇವೆ. ಅದು ಸುಳ್ಳು ಸತ್ಯ ಎನ್ನುವ ವಾದಕ್ಕಿಂತ ಅದನ್ನು ನಂಬಬೇಕಾದ ಪರಿಸ್ಥಿತಿ ಇರುತ್ತದೆ. ಕಿರುತೆರೆಯಲ್ಲಿ ಈ ನೆಲದ ಕಥೆಗಳು ದೊಡ್ಡ ಪ್ರಮಾಣದಲ್ಲಿ ಮರೆಯಾಗುತ್ತಿವೆ.

■ **ರಾಘವೇಂದ್ರ ಕೆ.**